# ಫಹಾದ್ ಫಾಸಿಲ್ ತೆಲುಗು ಕಲಿಕೆ

‘ಪುಷ್ಪಾ’ ತೆಲುಗು ಚಿತ್ರದ ಅಲ್ಪಾವಧಿಯ ಟ್ರೇಲರ್ ಚಿತ್ರಾಭಿಮಾನಿಗಳಲ್ಲಿ ನಿರೀಕ್ಷೆ ಹುಟ್ಟುಹಾಕಿದೆ. ರಕ್ತಚಂದನದ ದೊಡ್ಡ ಕಳ್ಳನ ಪಾತ್ರದಲ್ಲಿ ಅಲ್ಲು ಅರ್ಜುನ್ ಈ ಚಿತ್ರದಲ್ಲಿ ಅಭಿನಯಿಸುತ್ತಿದ್ದಾರೆ. ಕೋವಿಡ್‌ನಿಂದ ಈಗ ಚೇತರಿಸಿಕೊಂಡಿರುವ ಅಲ್ಲು ಅರ್ಜುನ್ ಮತ್ತೆ ಬಣ್ಣ ಹಚ್ಚಿಕೊಳ್ಳತೊಡಗಿದ್ದಾರೆ. ಜುಲೈ 5ರಿಂದ 40 ದಿನಗಳ ಅವಧಿಯ ಎರಡನೇ ಹಂತದ ಚಿತ್ರೀಕರಣ ಶುರುಮಾಡುವುದಾಗಿ



ಜೂನ್ ತಿಂಗಳಲ್ಲೇ ನಿರ್ದೇಶಕರು ನಿರ್ಧರಿಸಿದ್ದರು. ಅಂದುಕೊಂಡಂತೆ ಎಲ್ಲ ದಿನಗಳಲ್ಲೂ ಚಿತ್ರೀಕರಣ ಸಾಧ್ಯವಾದರೆ, ಪ್ರೇಕ್ಷಕರ ನಿರೀಕ್ಷೆಗೆ ಬೇಗ ಸ್ಪಂದಿಸಲು ಸಾಧ್ಯ ಎಂದು ನಿರ್ದೇಶಕರು ನಂಬಿದ್ದಾರೆ.

ತಮ್ಮ ನಯನಾಭಿನಯದಿಂದಲೇ ಸದ್ದು ಮಾಡುತ್ತಿರುವ ಮಲಯಾಳಂ ನಟ ಫಹಾದ್ ಫಾಸಿಲ್ ಈ ಚಿತ್ರದಲ್ಲಿ ಪ್ರತಿನಾಯಕನ ಪಾತ್ರಕ್ಕೆ ಜೀವತುಂಬಲಿದ್ದಾರೆ. ಇದುವರೆಗೆ ತೆಲುಗು ಚಿತ್ರರಂಗದಿಂದ ದೂರವೇ ಉಳಿದಿದ್ದ ಅವರು ತಮ್ಮ ಪಾತ್ರದ ತೂಕವನ್ನು ಗಮನಿಸಿ ನಟಿಸಲು ಒಪ್ಪಿದ್ದಾರೆ. ಯಾವುದೇ ಪಾತ್ರಕ್ಕೂ ಸಾಕಷ್ಟು ಹೋಂವರ್ಕ್ ಮಾಡಿಯೇ ತಯಾರಾಗುವುದು ಅವರ ಜಾಯಮಾನ. ಈ ಚಿತ್ರದ ತಮ್ಮ ಪಾತ್ರಕ್ಕೆ ತಾವೇ ಡಬ್ ಮಾಡಬೇಕು ಎಂದು ಮೊದಲೇ ಅವರು ನಿರ್ಧರಿಸಿದ್ದಾರೆ. ಅದಕ್ಕೆ ಅನುವಾಗಲೆಂದೇ ತೆಲುಗು ಕಲಿಯುತ್ತಿದ್ದಾರೆ. ನಿರ್ದೇಶಕರು ಎರಡನೇ ಹಂತದ ಚಿತ್ರೀಕರಣದಲ್ಲಿ ತಯಾರಾಗಿರುವಾಗಲೇ ಫಹಾದ್ ತೆಲುಗು ಭಾಷಾಭ್ಯಾಸದಲ್ಲಿ ತೊಡಗಿದ್ದು ಕೂಡ ಸುದ್ದಿಯಾಗಿದೆ.

ಈ ಚಿತ್ರದ ತಮ್ಮ ಪಾತ್ರವನ್ನು ಜನ ಉತ್ತಮ ರೀತಿಯಲ್ಲಿ ಸ್ವೀಕರಿಸುತ್ತಾರೆ ಎನ್ನುವ ನಂಬಿಕೆ ಫಹಾದ್ ಅವರಿಗೂ ಇದೆ. ವಿಜಯ್ ಸೇತುಪತಿ ಅವರಿಗೆ ಮೊದಲು ಈ ಪಾತ್ರದ ಅವಕಾಶವನ್ನು ನೀಡಲಾಗಿತ್ತು. ಆದರೆ, ಡೇಟ್ಸ್ ಸಮಸ್ಯೆಯಿಂದಾಗಿ ಅವರು ಒಪ್ಪಿಕೊಂಡಿರಲಿಲ್ಲ. ■

# ಸದ್ದು ಮಾಡಿದ ಕರೀನಾ ಸಂಭಾವನೆ



ಮೈಗಂಟಿದ ಚೆಂದದ ಬಟ್ಟೆ ತೊಟ್ಟು ಕನ್ನಡಿಯ ಎದುರು ತಮ್ಮ ಸಿಂಹಕಟಿಯನ್ನು ಮತ್ತೆ ತೋರಿಸಿ, ‘ಐ ಆ್ಯಮ್ ಬ್ಯಾಕ್ ಟು ನಾರ್ಮಲ್’ ಎಂದು ನಟಿ ಕರೀನಾ ಕಪೂರ್ ಮೊನ್ನೆಯಷ್ಟೆ ಹೇಳಿಕೊಂಡರು. ಆ ಫೋಟೊವನ್ನು ಸಾಮಾಜಿಕ ಜಾಲತಾಣದಲ್ಲಿ ಹಾಕಿಕೊಂಡರು. ಇದೇ ವರ್ಷ ಫೆಬ್ರುವರಿಯಲ್ಲಿ ಅವರಿಗೆ ದ್ವಿತೀಯ ಪುತ್ರೋತ್ಸವವಾಯಿತು. ಹೆರಿಗೆಯ ನಂತರ ಅವರು ತಮ್ಮ ದೇಹವನ್ನು ಹಳೆಯ ಆಕಾರಕ್ಕೆ ಬಗ್ಗಿಸಲು ವ್ಯಾಯಾಮ ಮಾಡಿದ್ದರು. ಅದು ಫಲ ಕೊಟ್ಟಿತು ಎಂಬ ಖುಷಿಯಲ್ಲಿ ಆ ಪೋಸ್ಟ್ ಹಂಚಿಕೊಂಡಿದ್ದು ಸಹಜವೇ.

ಅವರ ದೇಹಾಕಾರ ಸಹಜ ಸ್ಥಿತಿಗೆ ಬಂದದ್ದು ಸುದ್ದಿಯಾಗಲಿಲ್ಲ. ಆದರೆ, ‘ಸೀತಾ’ ಪೌರಾಣಿಕ ಚಿತ್ರಕ್ಕೆ ಅವರು ದೊಡ್ಡ ಸಂಭಾವನೆ ಕೇಳಿದ್ದು, ನೆಟ್ಟಿಗರ ಖಾರದ ಪ್ರತಿಕ್ರಿಯೆ ಹರಿದುಬರಲು ಕಾರಣವಾಗಿದೆ. ಅದೇ ಇದೀಗ ಸುದ್ದಿ.

ಅಲೌಕಿಕ್ ದೇಸಾಯಿ ‘ಸೀತಾ–ದಿ ಇನ್‌ಕಾರ್ನೇಷನ್’ ಎಂಬ ಸಿನಿಮಾ ನಿರ್ದೇಶಿಸಲಿದ್ದಾರೆ. ಅವರು ಸೀತೆಯ ಪಾತ್ರಕ್ಕೆ ಕರೀನಾ ಹೊಂದುತ್ತಾರೆ ಎಂದು ನಿರ್ಧರಿಸಿ, ಅವರ ಡೇಟ್ಸ್ ಕೇಳಿದರು. ಒಂದು ಮೂಲದ ಪ್ರಕಾರ ಕರೀನಾ ಈ ಪಾತ್ರಕ್ಕೆ 12 ಕೋಟಿ ರೂಪಾಯಿ ಸಂಭಾವನೆಯ ಬೇಡಿಕೆ ಇಟ್ಟರಂತೆ. ಅದಕ್ಕೆ ನಿರ್ದೇಶಕರು ಒಪ್ಪಿದರೋ ಇಲ್ಲವೋ ಎನ್ನುವುದು ಸ್ಪಷ್ಟವಾಗುವ ಮೊದಲೇ ಟೀಕಾಕಾರರು ಟ್ರೋಲ್ ಮಾಡತೊಡಗಿದರು. ‘ಮದುವೆಯಾಗಿರುವ, ಮಕ್ಕಳ ತಾಯಿಯಾಗಿರುವ ನಟಿಗೆ ಅಷ್ಟೊಂದು ಸಂಭಾವನೆ ಸಲ್ಲದು’ ಎಂದು ಕೆಲವರು ಪುರುಷಾಹಂಕಾರದ ದನಿ ಹೊಮ್ಮಿಸಿದರು. ಇನ್ನು ಕೆಲವರು, ‘ಸೀತೆಯಂಥ ಪಾತ್ರ ಮಾಡಲು ಅಷ್ಟೊಂದು ಸಂಭಾವನೆ ಕೇಳಬೇಕೆ; ಆ ಪಾತ್ರ ಸಿಗುವುದೇ ಸೌಭಾಗ್ಯವಲ್ಲವೆ’ ಎಂಬ ಸುಭಗ ಪ್ರಶ್ನೆ ಕೇಳಿದರು. ಮತ್ತೆ ಕೆಲವರು ಮುಸಲ್ಮಾನನ ಹೆಂಡತಿ ಕರೀನಾ ಎಂದು ಧರ್ಮವನ್ನು ಮುಂದು ಮಾಡಿ ಹಣಿಯಲು ಯತ್ನಿಸಿದರು.

ಇವೆಲ್ಲವನ್ನೂ ಸೂಕ್ಷ್ಮವಾಗಿ ಗಮನಿಸಿದ ನಟಿ ತಾಪ್ಸಿ ಪನ್ನು, ಟ್ರೋಲಿಗರನ್ನು ತರಾಟೆಗೆ ತೆಗೆದುಕೊಂಡರು. ಕರೀನಾ ಸ್ಟಾರ್ ನಟಿಯಾಗಿದ್ದವರು. ಅವರಿಗೆ ತಮಗೆಷ್ಟು ಬೇಕೋ ಅಷ್ಟು ಸಂಭಾವನೆ ಕೇಳುವ ಹಕ್ಕು ಇದೆ. ಪುರುಷರು ಎಷ್ಟು ಕೇಳಿದರೂ ಸುದ್ದಿಯಾಗುವುದಿಲ್ಲ. ನಟಿಯರ ವಿಷಯದಲ್ಲಿ ಯಾಕೆ ಈ ಭೇದಭಾವ ಎಂದು ತಾಪ್ಸಿ ಗಂಭೀರವಾಗಿ ಪ್ರತಿಕ್ರಿಯಿಸಿದರು.

ಕರೀನಾ ಈ ಯಾವ ಉಸಾಬರಿಗೂ ತಲೆ ಕೆಡಿಸಿಕೊಳ್ಳದೆ ತಮ್ಮ ತಾಯ್ತನದ ಸುಖವನ್ನು ಅನುಭವಿಸುತ್ತಿದ್ದಾರೆ. ■